ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 20–09–2017

ಪ್ರಟಕಣೆಯ ಕೃಪೆಗಾಗಿ

**ಕೌಶಲ್ಯಯುತ ಶಿಕ್ಷಣ ಕಾಲೇಜುಗಳಲ್ಲಿ ಸಿಗುವಂತಾಗಬೇಕು – ಪ್ರೊ. ಕುಮಾರ್**

ಕೊಳ್ಳೇಗಾಲ 20–09–2017 : ಪಠ್ಯ ಹಾಗೂ ಪಠ್ಯೇತರ ಬೋಧನೆಗಳಿಗಿಂತ ಇಂದು ಕಾಲೇಜುಗಳಲ್ಲಿ ಕೌಶಲ್ಯ ಭರಿತ ಶಿಕ್ಷಣ ದೊರೆಯುವಂತಾಗಬೇಕು. ಆಗ ಮಾತ್ರ ಪದವಿಧರರು ಉಜ್ವಲ ಭವಿಷ್ಯ ಹೊಂದಬಹುದಾಗಿದೆ ಎಂದು ಪ್ರೊ ಕುಮಾರ್, ನಿವೃತ್ತ ಪ್ರಾಚಾರ್ಯರು ಹಾಗೂ ಜೆಎಸ್‌ಎಸ್ ಮಹಿಳಾ ಕಾಲೇಜು ಆಡಳಿತ ಮಂಡಳಿ ಸದಸ್ಯರು ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಹಾಗೂ ನಿರ್ವಹಣಾಶಾಸ್ತ್ರ ವಿಭಾಗಗಳ ವತಿಯಿಂದ **"ಪದವೀಧರರಿಗೆ ಇರುವ ಮುಂದಿನ ಆಯ್ಕೆಗಳು"** ಎಂಬ ವಿಷಯದ ಮೇಲೆ ಆಯೋಜಿಸಿದ್ದ ವಿಶೇಷ ಉಪನ್ಯಾಸ ನೀಡುತ್ತಾ ಮಾತನಾಡಿದರು.

ಪ್ರಚಲಿತ ವಿಧ್ಯಮಾನಗಳು, ಸಾಮಾನ್ಯ ವಿಜ್ಞಾನ, ಸಾಮಾನ್ಯ ಜ್ಞಾನ, ಗಣಿತ ವಿಷಯದಲ್ಲಿ ಪರಿಪಕ್ವತೆ ಹೊಂದುವುದು ಇಂದು ವಿದ್ಯಾರ್ಥಿಗಳಿಗೆ ಬಹು ಮುಖ್ಯ ಪದವಿಯಲ್ಲಿನ ವಿಷಯಗಳಲ್ಲಿ ಹೆಚ್ಚೆಚ್ಚು ಅಂಕ ಪಡೆದು ಪದವಿ ಗಳಿಸಿದರಷ್ಟೇ ಸಾಕಾಗುವುದಿಲ್ಲ, ನಾಯಕತ್ವ ಕೌಶಲ್ಯತೆ, ಸಮಸ್ಯೆ ಪರಿಹರಿಸುವುದರಲ್ಲಿ ಕೌಶಲ್ಯತೆ ಮುಂತಾದ ಬಹುಮುಖಿ ಕೌಶಲ್ಯತೆಗಳನ್ನು ಬೆಳಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಬಿ ನಿರಂಜನಮೂರ್ತಿ, ಸಹಾಯಕ ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ ಇವರು ಪದವಿ ಮತ್ತು ಜ್ಞಾನ ಒಂದಕ್ಕೊಂದು ಪೂರಕ. ಕಾಲೇಜುಗಳಲ್ಲಿ ನಿಮ್ಮ ಅಧ್ಯಾಪಕರು ಪದವಿ ಗಳಿಸಲು ನಿಮ್ಮನ್ನು ಅರ್ಹತೆಗೊಳಿಸುತ್ತಾರೆ. ಆದರೆ ಇದೇ ಸಮಯದಲ್ಲಿ ತಾವು ಪದವಿಗಿಂತ ಮುಖ್ಯವಾದ ಲೋಕಜ್ಞಾನವನ್ನು ಪಡೆಯುವತ್ತ ಗಮನ ಹರಿಸಬೇಕು. ಪದವಿ ಜೀವನಾಂಶ ತಂದುಕೊಟ್ಟರೆ, ಜ್ಞಾನ ನಿಮ್ಮ ಜೀವನವನ್ನು ಸರ್ವ ರೀತಿ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಆನಂದಮಯ ಹಾಗೂ ಶ್ರೀಮಂತಗೊಳಿಸುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ವೇದಿಕೆಯಲ್ಲಿ ಪ್ರಾಚಾರ್ಯ ಪ್ರೊ ಉಮೇಶ ಮತ್ತು ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು ಉಪಸ್ಥಿತರಿದ್ದರು.





